

ದಾಸುವನ್ನು ತುಂಬಿಕೊಂಡು ಎಲ್ಲಿಗೋ ತೆಗೆದುಕೊಂಡು ಹೊರಟರು!

ರಾತ್ರಿ ಹತ್ತು ಗಂಟೆಯ ಹೊತ್ತಿಗೆ ದಾಸು ಹೊಸ ಪರಿಸರದಲ್ಲಿ ಬಂದು ಬಿದ್ದಿತ್ತು! ಅರೆಕ್ಷಣ ಅದಕ್ಕೆ ಏನೊಂದೂ ಅರ್ಥವಾಗಲಿಲ್ಲ. ತನ್ನನ್ನು ಯಾಕೆ ಬಿಟ್ಟು ಹೋದರೆಂದೂ ತಿಳಿಯಲಿಲ್ಲ. ತುಸು ಹೊತ್ತು ಸಪ್ಪೆ ಮುಖ ಮಾಡಿಕೊಂಡು ಮೋರಿಯೊಂದರ ಪಕ್ಕ ಕುಳಿತುಕೊಂಡಿತು. ಸುತ್ತಲೂ ಸಣ್ಣ ಕಾಡಿತ್ತು. ಅಲ್ಲಲ್ಲಿ ಒಂದೊಂದು ಮನೆ ಇರುವುದು ಅವುಗಳಿಂದ ತೂರಿ ಬರುವ ಬೆಳಕಿನಿಂದ ಗೊತ್ತಾಗುತ್ತಿತ್ತು. ಈಗ ಎಲ್ಲಿಗೆ ಹೋಗುವುದು? ಏನು ಮಾಡುವುದು? ಅಲ್ಲೇ ಯಾವುದಾದರೂ ಮನೆ ಹತ್ತಿರ ಹೋಗಿ ನೋಡುವುದಾ… ಅಥವಾ? ತನ್ನ ಮನೆಯನ್ನು ನೆನೆದು ದಾಸು ದುಃಖಿಸಿತು. ಎಷ್ಟು ಒಳ್ಳೆಯ ಊಟ, ಎಂಥಾ ಪ್ರೀತಿ … ಆದರೆ ಕೊನೆಗೆ ಹೀಗೇಕಾಯಿತು? ತಾನು ಪುನಃ 'ನಿಸರ್ಗ' ಮನೆಗೇ ಹೋಗಬೇಕೆಂದು ದಾಸು ಕಠಿಣವಾದ ನಿರ್ಧಾರ ತೆಗೆದುಕೊಂಡಿತು. ಆ ಮನೆ ಜನರನ್ನು ಅಗಲಿ ಇರಲು ಅದಕ್ಕೆ ಸಾಧ್ಯವಾಗಲಿಲ್ಲ. ಆದರೆ ಡಿಕ್ಕಿಯೊಳಗೆ ಕೂತು ಪ್ರಯಾಣಿಸಿದ್ದರಿಂದ ದಾರಿಯನ್ನೂ ನೋಡಿರಲಿಲ್ಲ. ದಾಸು ದೀರ್ಘವಾಗಿ ಮೂಗುಗಾಳಿ ಹಿಡಿಯಿತು. ತುಸು ದೂರ ರಸ್ತೆಯಲ್ಲಿ ಓಡಾಡಿ ವಾಸನೆ ಕಂಡುಕೊಂಡಿತು. ಧೈರ್ಯ ಮಾಡಿ ರಸ್ತೆ ಹಿಡಿದು ನಡೆಯತೊಡಗಿತು. ಮೂಗುಗಾಳಿ ಹಿಡಿಯುವುದು, ರಸ್ತೆಯನ್ನು ಮೂಸುವುದು, ನಡೆಯುವುದು! ದಾರಿ ತಪ್ಪಿ ಹೋಯಿತೆನಿಸಿದಾಗ ಪುನಃ ಮತ್ತೊಂದು ದಿಕ್ಕಿಗೆ ನಡೆಯುವುದು! ಹೀಗೆ ಮೂರು ಹಗಲು ಮೂರು ರಾತ್ರಿ ದಾಸು ನಡೆಯಿತು. ತನಗಾದ ಆಯಾಸ, ಹಸಿವು, ಬಾಯಾರಿಕೆ ಯಾವುದನ್ನೂ ಅದು ಲೆಕ್ಕಿಸಲಿಲ್ಲ. ನಡೆದೂ ನಡೆದು ಕಡೆಗೆ ನಾಲ್ಕನೆಯ ದಿನ ಸಂಜೆಯ ಹೊತ್ತಿಗೆ ದಾಸು 'ನಿಸರ್ಗ' ಮನೆಯನ್ನು ತಲುಪಿ ಸಿಟೌಟಿನಲ್ಲಿ ಮಲಗಿಬಿಟ್ಟಿತು. ದಾಸುಗೆ ಅಲ್ಲೇ ನಿದ್ದೆ ಬಂದಿತು.

ಮೂರ್ನಾಲ್ಕು ದಿನಗಳ ನಡಿಗೆಯಿಂದಾಗಿ ಅದರ ದೇಹ ಬಳಲಿ ಹೋಗಿತ್ತು. ಆದರೆ ತನ್ನ ಮನೆ, ಮನೆ ಜನರ ಬಳಿಗೆ ಬಂದೆನೆಂಬ ನೆಮ್ಮದಿ ಎದೆ ತುಂಬಿತ್ತು. ಹಾಗೆ ಮಲಗಿ ಎಷ್ಟು ಹೊತ್ತಾಗಿತ್ತೋ ಏನೋ; ಫಕ್ಕನೆ ಎಚ್ಚರವಾಗಿ ದಾಸು ಕಣ್ಣು ಬಿಟ್ಟು ನೋಡುತ್ತದೆ, ಏನು ನೋಡುವುದು! ಮನೆಯ ಮಕ್ಕಳು, ಅಮ್ಮ, ಅಪ್ಪ ಎಲ್ಲರೂ ಖುಷಿಯಲ್ಲಿ ಕುಣಿಯುತ್ತಿದ್ದಾರೆ! 'ದಾಸು, ದಾಸು….', 'ಹಾಲು ಕುಡಿ ಪುಟ್ಟಾ', 'ಅನ್ನ ತಿನ್ನು ಪುಟ್ಟಾ' ಎಂಬ ಉಪಚಾರ ಬೇರೆ! ಇದು ಕನಸಲ್ಲ ತಾನೇ? ಅಲ್ಲ, ಅದು ನಿಜವೇ! 'ಅಂತೂ ದಾಸು ಮನೆಗೆ ಬಂತಲ್ಲ; ನಾನು ಎಂಥಾ ತಪ್ಪು ಮಾಡಿಬಿಟ್ಟಿದ್ದೆ' ಮನೆಯ ಯಜಮಾನ ಹಳಹಳಿಸಿದರು. 'ಹೌದು ದಾಸು ಮರಳಿ ಸಿಕ್ಕಿದ್ದು ನಮ್ಮ ಅದೃಷ್ಟ' ಮನೆಯೊಡತಿ ಕೆನ್ನೆ ಒರೆಸಿಕೊಳ್ಳುತ್ತಿದ್ದರು! ಏಕಕಾಲಕ್ಕೆ ಬೆಕ್ಕು, ನಾಯಿ ಎರಡನ್ನೂ ಕಳೆದುಕೊಂಡು ಅವರೆಲ್ಲ ಕಂಗಾಲಾಗಿದ್ದರು. ಅದಲ್ಲದೆ ಏನೆಲ್ಲ ಸಾಹಸ ಮಾಡಿ ದಾಸು ಮರಳಿ ಬಂದದ್ದು ಅವರಿಗೆ ಬಹುದೊಡ್ಡ ವಿಷಯವೆನಿಸಿತ್ತು. ದಾಸುವಿನ ಪ್ರೀತಿ ಏನೆಂದು ಈಗ ಅವರಿಗೆ ಸರಿಯಾಗಿ ಅರ್ಥವಾಗಿತ್ತು.

ಆದರೆ ಅಷ್ಟು ದೂರ, ಸುಮಾರು ಏಳೆಂಟು ಮೈಲಿ ದಾಸು ಹೇಗೆ ನಡೆದು ಬಂದಿತು? ಮೊದಲೆಂದೂ ಕಂಡಿಲ್ಲದ ದಾರಿ ಅದಕ್ಕೆ ಹೇಗೆ ಗೊತ್ತಾಯಿತು? ಮನೆ ಜನರಿಗೆ ಆಶ್ಚರ್ಯವಾಯಿತು. 'ಕಾರಿನ ಟಯರ್ ವಾಸನೆ ಹಿಡಿದು ಬಂದಿರಬೇಕು' ಎಂದರು ಮಕ್ಕಳು. 'ಮೂಗುಗಾಳಿ ಹಿಡಿದೇ ಬಂದದ್ದು' ಎಂದರು ಅಪ್ಪ. 'ದಾಸುವಿಗೆ ಮಾತು ಬಂದಿದ್ರೆ ಅದರ ಬಳಿಯೇ ಕೇಳಿ ತಿಳಿದುಕೊಳ್ಳಬಹುದಿತ್ತು' ಎಂದು ಪರಿತಪಿಸಿದರು. ಹಾಗೆ ಕೇಳಿದ್ದರೂ ಉತ್ತರ ಹೇಳಲು ದಾಸುಗೆ ಗೊತ್ತಿತ್ತೇ?! 'ಅಬ್ಬಾ.. ನಾಯಿಗಳಿಗೆ ಎಷ್ಟೆಲ್ಲ ಬುದ್ಧಿ ಶಕ್ತಿಯಿದೆ!' ಮನೆಯೊಡತಿ ಹೊಗಳಿದರು.

ಹೇಳಲಾಗದ ಸಮಾಧಾನದೊಂದಿಗೆ ದಾಸು ಹಾಲು ನೆಕ್ಕಿ, ಊಟ ಮಾಡಿ ಗಡದ್ದಾಗಿ ನಿದ್ದೆ ಹೊಡೆಯಿತು! ●